A.—Sri H. M. CHANNABASAPPA (Minister for Industries).—

(*a*) Yes.

(*b*) During next year.

ಶ್ರೀ ಸಿ. ಎಚ್. ಲಿಂಗದೇವರು.—ಈ ಕೆರೆಯನ್ನು ಮುಂದಿನ ವರ್ಷ ಕಟ್ಟಿಸಲಾಗುತ್ತದೆ ಎಂದು ಹೇಳಿದ್ದೀರಿ. ಎಸ್ಟಿಮೇಟ್ ಎಷ್ಟಾಗಿದೆ ಸ್ವಾಮಿ ಈ ಕೆಲಸಕ್ಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—1 ಲಕ್ಷ 88 ಸಾವಿರ ರೂಪಾಯಿ ಆಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ವರ್ಷದ ಬಜೆಟ್‌ನಲ್ಲಿ ಹಣ ಒದಗಿಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಎಷ್ಟು ರೂಪಾಯಿ ಸ್ವಾಮಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—5,000 ರೂಪಾಯಿ ಒದಗಿಸಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ರೀತಿ ಹಣ ಒದಗಿಸುತ್ತಾ ಹೋದರೆ ಎಷ್ಟು ವರ್ಷಕ್ಕೆ ಈ ಕೆಲಸ ಪೂರ್ತಿ ಆಗುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—5,000 ರೂಪಾಯಿ ಒದಗಿಸಲಾಗಿದೆ. ಇನ್ನೂ ಹೆಚ್ಚಿಗೆ ಬೇಕಾದರೆ ಏರ್ಪಾಡುಮಾಡುತ್ತೇವೆ.

Bridges and Roads sanctioned for Bellary District.

Q.—260. Sri IJARI SIRASAPPA (Harapanahalli).—

Will the Government be pleased to state :—

the reason for the delay in execution of the bridges and roads sanctioned in Bellary District since the past two years?

A.—Sri H. M. CHANNABASAPPA (Minister for Industries).—

There has been no avoidable delay. Action is being taken to take up the works and complete them as early as possible.

Sri IJARI SIRASAPPA.—On the assurance given by Government in the answer, I have no supplementaries.

ಶ್ರೀ ಕೊಟ್ರಬಸವನಗೌಡ.—ಎಷ್ಟು ಸೇತುವೆಗಳನ್ನು ಕಟ್ಟಲಾಗುತ್ತಿದೆ ಸ್ವಾಮಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲ್ಕೈದು ಮಂಜೂರಾಗಿವೆ, ಇನ್ನೂ ಎರಡು ಮಂಜೂರಾಗುವುದರಲ್ಲಿವೆ.

ಶ್ರೀ ಕೊಟ್ರಬಸವನಗೌಡ.—ಮಂಜೂರಾಗಿರುವುದು ಯಾವುದು, ಆಗಿಲ್ಲದೇ ಇರುವುದು ಯಾವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೋನಿ-ಸಿರಗುಪ್ಪ ರಸ್ತೆಯ 20/3-4ನೇ ಮೈಲಿಯಲ್ಲಿ 3 ಲಕ್ಷ 35 ಸಾವಿರ ರೂಪಾಯಿನ ಕೆಲಸ ಆಗಿ ಮುಗಿಯುವುದಕ್ಕೆ ಬಂದಿದೆ. ಎಚ್.ಎಂ.ಎಫ್. ರಸ್ತೆಯ 3 1/8ನೇ ಮೈಲಿಯಲ್ಲಿ 1 ಲಕ್ಷ 33 ಸಾವಿರದ 500 ರೂಪಾಯಿನ ಅಂದಾಜು ಮಂಜೂರಾಗಿ ಕೆಲಸ ನಡೆಯುತ್ತಿದೆ. ಎಚ್. ಎಂ. ಎಫ್. ರಸ್ತೆಯ 28/8ನೇ ಮೈಲಿಯಲ್ಲಿ 75 ಸಾವಿರ ರೂಪಾಯಿನ ಅಂದಾಜಾಗಿ ಟೆಂಡರ್ ಅಪ್ರೂವ್ ಆಗಿದೆ. ಎಚ್.ಕೆ.ಕೆ.ಎಸ್.ಟಿ. ರಸ್ತೆ, ಚಿಕ್ಕಹಗರಿನಲ್ಲಿ 4 ಲಕ್ಷ 44 ಸಾವಿರ ರೂಪಾಯಿಗಳ ಅಂದಾಜು ಮಂಜೂರಾಗಿದೆ, ಮತ್ತು ಟೆಂಡರ್ ಶಿಫಾರಸಾಗಿ ಬಂದಿದೆ. ಎಚ್.ಕೆ.ಕೆ.ಎಸ್.ಟಿ. ರಸ್ತೆ ಬನ್ನಿಹಳ್ಳಿ ಹಳ್ಳಕ್ಕೆ ಅಡ್ಡಲಾಗಿ ಕಟ್ಟುವ ಸೇತುವೆಗೆ 1 ಲಕ್ಷ 60 ಸಾವಿರ ರೂಪಾಯಿ ಮಂಜೂರಾಗಿದೆ, ಮತ್ತು ಟೆಂಡರು ಶಿಫಾರಸಾಗಿ ಬಂದಿದೆ. ಅದೇ ರಸ್ತೆಯಲ್ಲಿ ಮರೂರು ಹಳ್ಳಕ್ಕೆ 1 ಲಕ್ಷ 45 ಸಾವಿರ ರೂಪಾಯಿನ ಅಂದಾಜು ಮಂಜೂರಾಗಿದೆ, ಟೆಂಡರ್ ಶಿಫಾರಸಾಗಿ ಬಂದಿದೆ. ಮತ್ತು ನಂಡೂರು-ತೋರಂಗಲ್ ರಸ್ತೆಯ 23/2 ಮೈಲಿಯಲ್ಲಿ ಒಂದು ಸೇತುವೆ ಕಟ್ಟಬೇಕೆಂದು ಇದೆ. ಅದು ಸ್ಕೂಟಿನಿಯಲ್ಲಿದೆ.

QUESTIONS FOR ANSWERS ON THE DAY

(But not taken up).

Girl Students studying in Colleges in Corporation Area, Bangalore.

Q.—287. Sri P. R. RAMAIYA (Basavanagudi).—

Will the Government be pleased to state :—

(*a*) the number of women students studying in the College Classes in the area of the Corporation of the City of Bangalore ;

(*b*) how many women hostels there are for college girls in the above area ;

(*c*) whether it has come to their notice that there is need for at least one more big hostel for college girls in the above area ;

(*d*) whether they will take early steps to start one more women students' hostel in the southern part of the City?

A.—Sri A. G. RAMACHANDRA RAO (Minister for Law and Education).—

(*a*) 2,008.

(*b*) Two Hostels.

(*c*) Yes.

(*d*) Sanction has been accorded for construction of 10 additional living